







ಸಂವಿಧಾನ ಸಭೆಯ ಸದಸ್ಯರ ಅಭಿಪ್ರಾಯವಾಗಿತ್ತು. ಅದರ ಪರಿಣಾಮ, 'ಚಿತ್ರಮಯ ಭಾರತ ಸಂವಿಧಾನ' ಸಿದ್ಧಗೊಂಡಿತು.

ಸಂವಿಧಾನದಲ್ಲಿ ಭಾರತದ ಭವ್ಯ ಚರಿತ್ರೆ, ಪರಂಪರೆ ಬಿಂಬಿತವಾಗಬೇಕು ಎನ್ನುವ ಪಂಡಿತ್ ನೆಹರೂ ಅವರ ಒತ್ತಾಸೆಯ ಹೊಣೆಗಾರಿಕೆಯನ್ನು ಕಲಾವಿದ ನಂದಲಾಲ್ ಬೋಸ್ ವಹಿಸಿಕೊಂಡರು. ರವೀಂದ್ರನಾಥ ಟ್ಯಾಗೋರ್ ಅವರು 'ಶಾಂತಿಕೇತನ'ದಲ್ಲಿ ಶುರು ಮಾಡಿದ ಕಲಾಸಂಸ್ಥೆಯ (ಕಲಾಭವನ) ಮೊದಲ ಪ್ರಾಂಶುಪಾಲರಾದ ನಂದಲಾಲ್ ಬೋಸ್, ತಮ್ಮದೇ ಆದ ಭಾರತೀಯ ಶೈಲಿ ಚಿತ್ರಕಲೆಯಿಂದ ಹೆಸರಾಗಿದ್ದವರು. ಯೂರೋಪ್ ಶೈಲಿಯ ಪ್ರಭಾವವಿದ್ದ ಆ ಕಾಲಘಟ್ಟದಲ್ಲಿ ಅಜಂತಾ ಭಿತ್ತಿಚಿತ್ರಗಳ ಪ್ರೇರಣೆಯಿಂದ ಭಾರತೀಯ ಚಿತ್ರಶೈಲಿಯನ್ನು ಅವರು ರೂಢಿಸಿಕೊಂಡಿದ್ದರು. ನಂದಲಾಲ್ ಬೋಸ್ ಅವರು ಇನ್ನೋರ್ವ ಖ್ಯಾತ ಕಲಾವಿದ ಅಂಬನೀಂದ್ರನಾಥ ಟ್ಯಾಗೋರ್ ಅವರ ಶಿಷ್ಯರು.

ಸಂವಿಧಾನದ ಎಲ್ಲಾ ವಿವರಗಳನ್ನು ಮೊದಲು ಕೈಬರಹದ ಮೂಲಕ ದಾಖಲಿಸಲಾಯಿತು. ಸುಂದರ ಕೈಬರಹವಿದ್ದ ತಮ್ಮ ವಿದ್ಯಾರ್ಥಿ ಪ್ರೇಮ್ ಬಿಹಾರಿ ನಾರಾಯಣ್ ರಾಯ್ಜಾದ ಅವರನ್ನು ನಂದಲಾಲ್ ಬೋಸ್ ಆರಿಸಿ, ಅವರಿಗೆ ಸಂವಿಧಾನ ಬರೆಯುವ ಕೆಲಸವನ್ನು ವಹಿಸಿಕೊಟ್ಟರು. ಸಂವಿಧಾನದ 479 ಪುಟಗಳಿದ್ದ ದಾಖಲೆಯನ್ನು ತಮ್ಮ ಸುಂದರ ಕೈಬರಹದಿಂದ ಬರೆದು ಮುಗಿಸಲು ಪ್ರೇಮ್ ಬಿಹಾರಿ ಅವರಿಗೆ ಆರು ತಿಂಗಳು ಬೇಕಾದವು.

ಬೋಸರು ಆರಿಸಿಕೊಂಡಿದ್ದ ಶಾಂತಿನಿಕೇತನದ ವಿದ್ಯಾರ್ಥಿಗಳು ಪ್ರತಿ ಪುಟವನ್ನು ಕಲಾತ್ಮಕ ಚೌಕಟ್ಟಿನಿಂದ ಸಿಂಗರಿಸಿ ಸಿದ್ಧಗೊಳಿಸಿದರು. ಒಟ್ಟು 22 ಅಧ್ಯಾಯಗಳಿದ್ದ ಸಂವಿಧಾನಕ್ಕೆ ವಿಶಿಷ್ಟ ಕಲೆಯನ್ನು ಸೃಷ್ಟಿಸಿಕೊಟ್ಟ ನಂದಲಾಲ್ ಬೋಸ್ ಅವರು, ಭಾರತದ ನಾಲ್ಕು ಸಾವಿರ ವರ್ಷಗಳ ಚರಿತ್ರೆಯನ್ನು ತಮ್ಮ ಕಲೆಯ ಮೂಲಕ ಅರಳಿಸಿದರು. ಪ್ರತಿ ಅಧ್ಯಾಯದ ಆರಂಭದ ಪುಟದಲ್ಲಿ ಭಾರತದ ಕಲೆ, ಸಂಸ್ಕೃತಿ, ಸ್ವಾತಂತ್ರ್ಯ ಹೋರಾಟ, ಗಣ್ಯನಾಯಕರ ಚಿತ್ರಗಳು ಇರುವಂತೆ ನೋಡಿಕೊಂಡರು.

ಪ್ರಪ್ರಥಮ ಅಧ್ಯಾಯಕ್ಕೆ ಮುನ್ನುಡಿ ಬರೆದಿದ್ದು ಹರಪ್ಪ ಮೊಹೆಂಜೊದಾರೊ ಸಂಸ್ಕೃತಿಯನ್ನು ಸಮರ್ಥವಾಗಿ ಪ್ರತಿನಿಧಿಸುವ ಗೂಳಿ ಚಿತ್ರ. ಸಂವಿಧಾನದ ಆಶಯಗಳನ್ನು ಅರ್ಥಪೂರ್ಣವಾಗಿ ಆಕರ್ಷಕ ಚಿತ್ರಗಳ ಮೂಲಕ ಕಟ್ಟಿಕೊಡುವ ಕೆಲಸವೂ ಮೂಲಸಂವಿಧಾನ ಪ್ರತಿಗಳಲ್ಲಿದೆ.

ಭಾರತದ ಪ್ರಸಿದ್ಧ ಮಹಾಕಾವ್ಯಗಳಾದ ರಾಮಾಯಣ ಹಾಗೂ ಮಹಾಭಾರತದ ಮುಖ್ಯ ಘಟ್ಟಗಳ ಚಿತ್ರಗಳು ಸಂವಿಧಾನದಲ್ಲಿ ಚಿತ್ರಣಗೊಂಡಿರುವುದು ವಿಶೇಷ. ಮೂಲಭೂತ ಹಕ್ಕುಗಳ ವಿವರಗಳಿರುವ ಸನ್ನಿವೇಶದಲ್ಲಿ ರಾಮ, ಲಕ್ಷ್ಮಣ, ಸೀತೆಯರ ಸುಂದರ ಚಿತ್ರಗಳಿವೆ. ರಾಷ್ಟ್ರಪತಿ ಹಾಗೂ ಉಪ ರಾಷ್ಟ್ರಪತಿಗಳ ಕರ್ತವ್ಯ ಹೊಣೆಗಾರಿಕೆಯ ಉಲ್ಲೇಖವಿರುವಲ್ಲಿ ಚಿತ್ರಣಗೊಂಡಿರುವುದು ಗೌತಮ ಬುದ್ಧ.

ಮಹಾಭಾರತ ಯುದ್ಧದ ಮೊದಲು ಜರುಗುವ ಕೃಷ್ಣ–ಅರ್ಜುನರ ಸಂವಾದದ ದೃಶ್ಯಗಳ ಹಿನ್ನೆಲೆಯಲ್ಲಿ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಕರ್ತವ್ಯಗಳು ನಿರೂಪಣೆಗೊಂಡಿವೆ.

ಭಾರತ ಇತಿಹಾಸದ ವಿವಿಧ ಕಾಲಘಟ್ಟಗಳ ವಸ್ತುಸ್ಥಿತಿಯನ್ನು ನಂದಲಾಲರು ಸೂಕ್ಷ್ಮವಾಗಿ ನಿರೂಪಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದ ಸಂದರ್ಭಕ್ಕೆ ಝಾನ್ಸಿರಾಣಿ ಲಕ್ಷ್ಮೀಬಾಯಿ, ಟಿಪ್ಪು ಸುಲ್ತಾನರ ಚಿತ್ರಗಳಿದ್ದರೆ, ಪ್ರಸಿದ್ಧ ಉಪ್ಪಿನ ಸತ್ಯಾಗ್ರಹ ಕಾಲದಲ್ಲಿ ಮಹಾತ್ಮ ಗಾಂಧಿ ಅವರ ಚಿತ್ರವಿದೆ. ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 'ಆಜಾದ್ ಹಿಂದ್' ಚಿತ್ರವಿದೆ.

ವೇದಕಾಲ, ರಾಮಾಯಣ, ಮಹಾಭಾರತವನ್ನು ನೆನಪಿಸುವ ಚಿತ್ರಗಳನ್ನು ಒಳಗೊಂಡ ಸಂವಿಧಾನ ಮಹಾಜನಪದ, ನಂದ, ಮೌರ್ಯ, ಗುಪ್ತ, ಮುಸ್ಲಿಂ, ಬ್ರಿಟಿಷ್ ಆಡಳಿತಾವಧಿ, ಶಿವಾಜಿ ಮಹಾರಾಜ್, ಗುರುಗೋವಿಂದ ಸಿಂಗ್, ಅಕ್ಬರ್ ಅವರ ಚಿತ್ರಗಳನ್ನೂ ಒಳಗೊಂಡಿದೆ.

ನಳಂದಾ ವಿಶ್ವವಿದ್ಯಾನಿಲಯ, ನಾಟ್ಯಪ್ರಣೀತ ನಟರಾಜ, ವಿಕ್ರಮಾದಿತ್ಯನ ಆಸ್ಥಾನ, ವೇದಕಾಲದ ಗುರುಕುಲ, ಮಹಾಬಲಿಪುರ, ಒಡಿಶಾದ ವಾಸ್ತುಶೈಲಿ, ರಾಜಸ್ಥಾನಿ ಶೈಲಿಯ ಪೂರಕ ಚಿತ್ರಗಳು ಸಂವಿಧಾನದಲ್ಲಿವೆ. ಈ ಸಂವಿಧಾನದ ಹಸ್ತಪ್ರತಿಯ ತೂಕ 3.75 ಕೆ.ಜಿ.

ಕೈಬರಹದ ಎರಡು ಮೂಲಪ್ರತಿಗಳು ಹಿಂದಿ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿವೆ. ಇನ್ನೊಂದು ಪ್ರತಿ, ಮಾಹಿತಿ ಮಾತ್ರವುಳ್ಳ ಮುದ್ರಿತ ಪ್ರತಿ. ಸಂವಿಧಾನ ಸಭೆಯ ಎಲ್ಲಾ ಸದಸ್ಯರು 1950ರ ಜನವರಿ 24ರಂದು ಮೂಲಪ್ರತಿಗಳಿಗೆ ಸಹಿ ಮಾಡಿದರು. ಸಂವಿಧಾನವನ್ನು 1950ರ ಜನವರಿ 26ರಂದು ಅಂಗೀಕರಿಸಲಾಯಿತು.

ಚಿತ್ರಗಳಿಂದ ಅಲಂಕಾರಗೊಂಡ ಎರಡು ಸಂವಿಧಾನದ ಮೂಲಪ್ರತಿಗಳನ್ನು ಈಗ ಲೋಕಸಭೆಯ ಗ್ರಂಥಾಲಯದಲ್ಲಿ ಜತನದಿಂದ ಕಾಪಿಡಲಾಗಿದೆ.